# ‘ನಮ್ಮ ಮಗ ಮೈಸೂರಿನ ಹುಡುಗ’



ದಾರ್ಯುಶ್ ಶಫಿ ಹಾಗೂ ಬೆಹ್ನಾಜ್ ಮಾಲ್‌ಮಿರ್. ಅವರ ಮಗು ಆರ್ಸಿನ್ ಶಫಿ

ಪ್ರವಾಸಕ್ಕೆಂದು ಬರುವ ವಿದೇಶಿಗರು ಇಲ್ಲೇ ನೆಲೆಯೂರಿರುವ ಅನೇಕ ಉದಾಹರಣೆಗಳಿವೆ. ಇರಾನ್‌ನ ದಾರ್ಯುಶ್ ಶಫಿ ಹಾಗೂ ಬೆಹ್ನಾಜ್ ಮಾಲ್‌ಮಿರ್ ದಂಪತಿಯದ್ದು ಭಿನ್ನ ಕಥೆ. 2009ರಲ್ಲಿ ಸ್ನೇಹಿತನೊಂದಿಗೆ ಪ್ರವಾಸಕ್ಕೆಂದು ಭಾರತಕ್ಕೆ ಬಂದ ದಾರ್ಯುಶ್ ಅವರಿಗೆ ಮುಂಬೈ ವಿಮಾನ ನಿಲ್ದಾಣದಲ್ಲಿ ಬೆಹ್ನಾಜ್ ಅವರ ಪರಿಚಯವಾಯಿತು. ಬೆಹ್ನಾಜ್ ಗೋವಾದಲ್ಲಿ ಬಿ.ಎ ಪದವಿ ಮುಗಿಸಿ ಇರಾನ್‌ಗೆ ಮರಳುತ್ತಿದ್ದರು. ಸಮಾನ ಮನಸ್ಕರ ಮನಗಳೂ ಪ್ರೀತಿಯತ್ತ ವಾಲಿದವು. ವರ್ಷದ ತರುವಾಯ ಸತಿ– ಪತಿಗಳಾದರು.

ಅಷ್ಟೊತ್ತಿಗಾಗಲೇ ದಾರ್ಯುಶ್ ಎಂಎಸ್ಸಿಯಲ್ಲಿ ಸ್ನಾತಕೋತ್ತರ ಪದವಿ ಮುಗಿಸಿ ಪಿಎಚ್.ಡಿ ಮಾಡುವ ಚಿಂತನೆಯಲ್ಲಿದ್ದರು. ಪತ್ನಿಯ ಸಲಹೆಯಂತೆ ಭಾರತಕ್ಕೆ ಬಂದರು. 2010ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿ ಸೇರಿಕೊಂಡ ದಾರ್ಯುಶ್ ವರ್ಷದ ಬಳಿಕ ತಮ್ಮ ಪತ್ನಿಯನ್ನೂ ಇಲ್ಲಿಗೆ ಕರೆಸಿಕೊಂಡು ಮೈಸೂರು ವಿಶ್ವವಿದ್ಯಾಲಯದಲ್ಲಿ ಎಂ.ಎ (ಸಂವಹನ ಮತ್ತು ಪತ್ರಿಕೋದ್ಯಮ) ಪದವಿಗೆ ಸೇರಿಸಿದರು. ಮನೆಯೊಂದನ್ನು ಬಾಡಿಗೆ ಪಡೆದು ಇಲ್ಲಿಯೇ ಸಂಸಾರವೂ ಶುರುವಾಯಿತು. ಅವರ ಪ್ರೀತಿಯ ದ್ಯೋತಕವಾಗಿ ಆರ್ಸಿನ್ ಶಫಿ ಜನಿಸಿದ. ಸದ್ಯ ದಾರ್ಯುಶ್ ಅವರು ಪಿಎಚ್.ಡಿ ಮುಗಿಸಿದ್ದು, ಬೆಹ್ನಾಜ್ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ವಿಷಯದಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ.

‘ನಮ್ಮ ಜೀವನದ ಪ್ರಮುಖ ಘಟ್ಟಗಳೆಲ್ಲವೂ ಭಾರತದಲ್ಲೇ ನಡೆದವು. ಹೀಗಾಗಿ, ಈ ದೇಶ ಎಂದರೆ ನಮಗೆ ಅಚ್ಚುಮೆಚ್ಚು. ಅದರಲ್ಲೂ ಮೈಸೂರು ನಮ್ಮ ಪ್ರೀತಿಯ ಊರು’ ಎಂದು ನಗೆ ಬೀರುತ್ತಾರೆ ದಂಪತಿ.

‘ಈಗಲೂ ನಮ್ಮ ಮನೆ ಎಂದು ಇದ್ದರೆ ಅದು ಮೈಸೂರಲ್ಲಿ ಮಾತ್ರವೇ. ದಾಂಪತ್ಯದ ಬದುಕನ್ನು ಶುರು ಮಾಡಿದ್ದು ಇಲ್ಲಿಯೇ. ಇರಾನ್‌ನಲ್ಲಿ ನಮ್ಮ ಸ್ವಂತದ್ದು ಏನೂ ಇಲ್ಲ. ನಮ್ಮ ದೇಶಕ್ಕೆ ಮರಳಿದರೆ ಬಾಡಿಗೆ ಮನೆ ಹುಡುಕಬೇಕು. ಇಬ್ಬರ ಬದುಕಿನಲ್ಲೂ ಸಂತೋಷದ ‘ಮೊದಲು’ಗಳನ್ನು ಈ ದೇಶ ನೀಡಿದೆ. ನಾಲ್ಕು ವರ್ಷದ ಮಗ ಆರ್ಸಿನ್ ಶಫಿ ಇಲ್ಲೇ ಜನಿಸಿದ್ದು. ಹಾಗಾಗಿ ಅವನು ಇರಾನ್‌ನವನಲ್ಲ. ಮೈಸೂರಿನ ಹುಡುಗ’ ಎಂದು ಹೆಮ್ಮೆಯಿಂದ ಹೇಳುತ್ತಾರೆ ದಂಪತಿ.

ಇಬ್ಬರೂ ವ್ಯಾಸಂಗ ಮಾಡುತ್ತಿರುವ ಸಮಯದಲ್ಲಿ ಜನಿಸಿದ ಆರ್ಸಿನ್‌ನ ಪಾಲನೆ– ಪೋಷಣೆಗೂ ದಂಪತಿ ಸಾಕಷ್ಟು ಕಷ್ಟಪಟ್ಟಿದ್ದಾರೆ. ಸ್ವಂತ ಊರಿನಲ್ಲಾದರೆ ಅಜ್ಜಿ– ತಾತನ ನೆರವು ಪಡೆಯಬಹುದು. ಆದರೆ, ಇಲ್ಲಿ ಅದು ಸಾಧ್ಯವಿಲ್ಲದ ಮಾತು. ಸಾಮಾನ್ಯವಾಗಿ 9 ತಿಂಗಳವರೆಗೆ ಶಿಶುಗಳನ್ನು ಮನೆಯಲ್ಲಿಯೇ ಪಾಲನೆ ಮಾಡಲಾಗುತ್ತದೆ. ಆದರೆ ಆರ್ಸಿನ್, ಎರಡು ತಿಂಗಳ ಮಗುವಾದಾಗಿನಿಂದಲೂ ಹೊರ ಜಗತ್ತನ್ನು ಕಾಣುತ್ತಿದ್ದಾನೆ. ದಂಪತಿ ಎಲ್ಲಿಗೆ ಹೋದರೂ ಜತೆಯಲ್ಲಿ ಮಗುವನ್ನು ಕರೆದುಕೊಂಡು ಹೋಗೂವುದೂ ಅನಿವಾರ್ಯವಾಗಿತ್ತು. ಬೆಹ್ನಾಜ್ ತರಗತಿಗೆಂದು ಹೋದರೆ, ದಾರ್ಯುಶ್ ಮಗುವನ್ನು ನೋಡಿಕೊಳ್ಳುತ್ತಿದ್ದರು. ಎರಡು ತರಗತಿ ಮುಗಿದ ಬಳಿಕ ಹಾಲು ಕುಡಿಸಲು ಬೆಹ್ನಾಜ್ ಬಳಿ ಕರೆದುಕೊಂಡು ಬರುತ್ತಿದ್ದರು. ದಾರ್ಯುಶ್ ಕೆಲಸದಲ್ಲಿ ತೊಡಗಿದ್ದಾಗ ಬೆಹ್ನಾಜ್ ಮಗುವಿನೊಂದಿಗೆ ತರಗತಿ ಕೇಳಿದ ಉದಾಹರಣೆಗಳೂ ಇವೆ.

ಇಲ್ಲಿ ಬಚ್ಚಿಟ್ಟ ಪ್ರೀತಿ!: ‘ಮದುವೆಯ ವಿಷಯ ಬಂದಾಗ ಇಲ್ಲಿ ಜಾತಿಯೇ ಮುಖ್ಯವಾಗುತ್ತದೆ. ಅಂತರ್ಜಾತಿ ವಿವಾಹ ಇಲ್ಲಿ ಬೆರಳಣಿಕೆಯಷ್ಟು ಮಾತ್ರವೇ ನಡೆಯುತ್ತವೆ. ಪ್ರೀತಿಸಿ ವಿವಾಹವಾಗುವವರ ಸಂಖ್ಯೆ ಕಡಿಮೆ. ಆದರೆ, ಇರಾನ್‌ನಲ್ಲಿ ಮೊದಲು ಪ್ರೀತಿಗೆ ಆದ್ಯತೆ. ನಾವು ಯಾರನ್ನು ಪ್ರೀತಿಸಿದರೂ ಮದುವೆಗೆ ಯಾವುದೇ ಅಡ್ಡಿ ಇರುವುದಿಲ್ಲ. ಬಡವ, ಶ್ರೀಮಂತ, ಜಾತಿಯ ಯಾವ ಕಟ್ಟುಪಾಡೂ ಇಲ್ಲ. ಇಲ್ಲಿಯೂ ಪ್ರೀತಿಸುವ ಮನಗಳು ಬಹಳಷ್ಟಿವೆ. ಆದರೆ, ಪ್ರೀತಿಸಿದರೂ ಹೊರಗಿನ ಜಗತ್ತಿಗೆ ತೋರಿಸಿಕೊಳ್ಳುವುದಿಲ್ಲ. ಬಚ್ಚಿಟ್ಟು ಪ್ರೀತಿಸುತ್ತಾರೆ. ಯಾಕೆಂದರೆ ಮದುವೆ ಆಗುತ್ತೇವೆಂಬ ಖಾತರಿ ಇರುವುದಿಲ್ಲ’ ಎನ್ನುತ್ತಾರೆ ದಾರ್ಯುಶ್.

ಹಲವು ಸಂತೋಷಗಳನ್ನು ನೀಡಿರುವ ದೇಶ, ಕೆಲ ಕಹಿಗಳನ್ನೂ ದಂಪತಿಗೆ ನೀಡಿದೆ. ದಾರ್ಯುಶ್ ಪಿಎಚ್.ಡಿ ಪದವಿಗೆ ವಿಶ್ವವಿದ್ಯಾಲಯಕ್ಕೆ ಸೇರಲು ಬಂದಾಗ ಸಣ್ಣ ಕಾರಣಕ್ಕಾಗಿ ಒಂದು ವರ್ಷದವರೆಗೆ ಅನುಮತಿ ಸಿಗಲಿಲ್ಲವಂತೆ. ‘ನನ್ನದಲ್ಲದ ಕಾರಣಕ್ಕಾಗಿ, ಉಪನ್ಯಾಸಕರ ನಡುವಿನ ಆಂತರಿಕ ಸಮಸ್ಯೆಗಳಿಂದ ನಮ್ಮ ವ್ಯಾಸಂಗಕ್ಕೆ ಅಡ್ಡಿ ಉಂಟಾಯಿತು’ ಎಂದು ಬೇಸರದಿಂದ ನುಡಿಯುತ್ತಾರೆ ಅವರು.

‘ಶಿಕ್ಷಣ ವ್ಯವಸ್ಥೆಯಲ್ಲಿ ಸೌಲಭ್ಯದ ವಿಚಾರಕ್ಕೆ ಬಂದರೆ ಇರಾನ್ ಸಾಕಷ್ಟು ಮುಂದಿದೆ. ಶತಮಾನದ ಇತಿಹಾಸ ಹೊಂದಿರುವ ಈ ವಿಶ್ವವಿದ್ಯಾನಿಲಯದ ಪ್ರಯೋಗಾಲಯಗಳಲ್ಲಿ ಅಗತ್ಯ ಸೌಲಭ್ಯಗಳೇ ಇಲ್ಲ. ಇದರಿಂದ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಡಕುಂಟಾಗಿದೆ’ ಎನ್ನುತ್ತಾರೆ ದಾರ್ಯುಶ್.

ವ್ಯಾಸಂಗದ ಜತೆಗೆ ಬೆಹ್ನಾಜ್ ಯೋಗ ತರಬೇತಿ ಪಡೆಯುತ್ತಿದ್ದಾರೆ. ದಿನದ ನಾಲ್ಕು ಗಂಟೆ ಯೋಗಕ್ಕಾಗಿ ಮೀಸಲಿಟ್ಟಿರುವ ಬೆಹ್ನಾಜ್ ಯೋಗದ ವಿವಿಧ ಪ್ರಕಾರಗಳನ್ನು ಕರಗತ ಮಾಡಿಕೊಂಡಿದ್ದಾರೆ.

ಮುಂಬೈ, ದೆಹಲಿ, ಹೈದರಾಬಾದ್, ಗೋವಾ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಬೆಂಗಳೂರು, ಊಟಿ ಸೇರಿ ಹಲವಾರು ಸ್ಥಳಗಳನ್ನು ಸುತ್ತಿರುವ ದಂಪತಿ ಜೀವನ ಸಾಗಿಸಲು ಮೈಸೂರೇ ಮೇಲು ಎಂದು ಹೇಳುತ್ತಾರೆ. ಬದುಕಿಗೆ ಹಲವು ಮೊದಲುಗಳನ್ನು ಕೊಟ್ಟ ಮೈಸೂರಿನಲ್ಲೇ ನೆಲೆಯೂರಬೇಕೆಂಬುದು ದಂಪತಿಯ ಇಚ್ಛೆ. ಸಂಶೋಧನೆ ಮುಗಿಸಿ ಇರಾನ್‌ಗೆ ಮರಳುವ ಚಿಂತನೆಯಲ್ಲಿರುವ ದಂಪತಿ 10 ವರ್ಷಗಳ ಬಳಿಕ ಮೈಸೂರಿಗೆ ಬಂದು ನೆಲೆಸಬೇಕೆಂದಿದ್ದಾರೆ.

■ ಸುಮಾ ಬಿ